ಇವತ್ತಿನವರೆಗೂ ನಮಗೆ ಟೀಚರ್ಸ್ ಕೊಟ್ಟಿಲ್ಲ. ನಮ್ಮಲ್ಲಿ 171 ಜನ ಟೀಚರ್ಸ್ shortageಇದೆ.21ಜನ ಹೈಸ್ಕೂಲ್ ಟೀಚರ್ಸ್ shortageಇದ್ದಾರೆ. ನಾವು ನಿಜವಾಗಿ ಸಮಾಜವನ್ನು ಕಟ್ಟಬೇಕಾದರೆ ಕೇವಲ ಅದು ಶಿಕ್ಷಣದಿಂದ ಮಾತ್ರ ಸಾಧ್ಯ. ಹಾಗಾದರೆ ನಾವು ಯಾವ ರೂಟಲ್ಲಿ ಹೋಗುತ್ತಿದ್ದೇವೆ? ಸಮಾಜಕ್ಕೆ ನಾವು ಶಿಕ್ಷಕರನ್ನೇ ಕೊಡುವುದಕ್ಕೆ ಆಗುವುದಿಲ್ಲವೆಂದರೆ, ಇನ್ನೇನು ನಾವು ಅಭಿವೃದ್ಧಿ ಮಾಡುವುದಕ್ಕೆ ಹೊರಟಿದ್ದೇವೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ: ಎಲ್ಲಾ ಖಾಸಗಿ ಶಾಲೆಗಳಗೆ ಹೋಗುತ್ತಿದ್ದಾರೆ.ಸರ್ಕಾರಿ ಶಾಲೆಗೆ ಯಾರೂ ಹೋಗುತ್ತಿಲ್ಲ.

(ಗೊಂದಲ)

ಉಪಾಧ್ಯಕ್ಷರು :ತಾವು ಹೇಳಿದ್ದೀರಿ, ತಾವು ಕುಳಿತುಕೊಳ್ಳಿ. ರೇವಣ್ಣನವರೆ ಒಂದು ನಿಮಿಷ.

(ಗೊಂದಲ)

ಉಪಾಧ್ಯಕ್ಷರು; ಮಾನ್ಯ ಶಿವಲಿಂಗೇಗೌಡರೆ ತಾವು ಕುಳಿತುಕೊಳ್ಳಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಶಾಸಕರುಗಳಾದ ಶ್ರೀ ಈ.ತುಕಾರಾಮ್ ಶ್ರೀ ಎಸ್. ಸಂಪಂಗಿ ಹಾಗೂ ಶ್ರೀ ಕೆ .ಅಭಯಚಂದ್ರ ಜೈನ್ ಸದನದ ಬಾವಿಗೆ ಬಂದರು)

ಶ್ರೀ ಸಿದ್ದರಾಮಯ್ಯ: ತುಕಾರಾಮ್ ಅವರೇ, ಈ ಕಡೆಗೆ ಬನ್ನಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೇ, ಶಿಕ್ಷಣ ಅದುPriority subject,ಅದುPriority area. ಮಾನ್ಯ ಶಿಕ್ಷಣ ಸಚಿವರು ಬಹಳ ಸಮರ್ಥವಾಗಿದ್ದಾರೆಂದು ನಾನು ಅಂದುಕೊಂಡಿದ್ದೆ. ಅಲ್ಲಿ ಟೀಚರ್ಸ್ ಇಲ್ಲವೆಂದರೆ ಅಸಮರ್ಥತೆ ಎಂದು ಅರ್ಥ. ಟೀಚರ್‌ಗಳು ಹಳ್ಳಿಗಾಡಿನಲ್ಲಿ ಇಲ್ಲದೇ ಹೋದರೆ ಉದಾ: ಸಂಡೂರಿನಲ್ಲಿ 171 ಜನ ಇಲ್ಲವೆಂದರೆ ಅಲ್ಲಿ ಸುಮಾರು 25% ಟೀಚರ್ಸ್ ಇಲ್ಲವೆಂದಾಯಿತು. ಒಂದು ತಾಲ್ಲೂಕಿನಲ್ಲಿ 500–600 ಜನ ಮೇಸ್ಟ್ರುಗಳಿರುತ್ತಾರೆ. 171 ಜನ ಇಲ್ಲಾ ಎಂದರೆmore than 25% ,30% teachers ಅಲ್ಲಿ ಇಲ್ಲ. ಹಾಗಾದರೆ ನಮ್ಮ ಮಕ್ಕಳಿಗೆ ಪಾಠ ಹೇಗೆ ಹೇಳಿ ಕೊಡುತ್ತಾರೆ? ಅಲ್ಲಿ ಆ ಮಕ್ಕಳಿಗೆ ಗುಣಮಟ್ಟದ

ಶಿಕ್ಷಣ ಹೇಗೆ ಸಿಗುತ್ತದೆ? ಸರ್ಕಾರಿ ಶಾಲೆಗೆ ಬರುವ ಮಕ್ಕಳುಗಳು ಯಾರು? ರೈತರ ಮಕ್ಕಳು ಬಡವರ ಮಕ್ಕಳು ಕೂಲಿ ಮಾಡುವವರ ಮಕ್ಕಳು, ದಲಿತರ ಮಕ್ಕಳು, ಹಿಂದುಳಿದವರ ಮಕ್ಕಳು, ಇಂತಹ ಮಕ್ಕಳುಗಳೇ ಬರುವವರು. ಶ್ರೀಮಂತರ ಮಕ್ಕಳುಗಳೆಲ್ಲಾ ಇಂಗ್ಲೀಷ್ ಮೀಡಿಯಮ್ ಶಾಲೆಗಳು, ಕಾನ್ವೆಂಟ್‌ಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಈ ತರಹ ಪರಿಸ್ಥಿತಿ ಇರುವಾಗ ನಾವು ಟೀಚರ್ಸ್ ಅಪಾಯಿಂಟ್ ಮಾಡಿಲ್ಲ, ಹೈಸ್ಕೂಲ್‌ಗಳಿಗೆ ಪರೀಕ್ಷೆ ಮಾಡಿದ್ದೇವೆ, ಜೂನಿಯರ್ ಕಾಲೇಜುಗಳಿಗೆ ಉಪನ್ಯಾಸರಿಗೆ ಪರೀಕ್ಷೆ ಮಾಡಿದ್ದೇವೆ, ಪ್ರಾಥಮಿಕ ಶಿಕ್ಷಕರಿಗೆFinance Department ನವರನ್ನು ಕೇಳುತ್ತೇನೆಂದರೆ ಹೇಗೆ? ನಾನೂFinance Minister ಆಗಿದ್ದೆ.

ಶ್ರೀ ಎಂ.ಬಿ.ಪಾಟೀಲ್:Finance Department ಎಂದರೆcold storage, filesವಾಪಸ್ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ: 1994 ಯಿಂದ 1999 ರವರೆಗೆ ನಾನುFinance Minister ಆಗಿದ್ದೆ, ತೆಗೆದು ನೋಡಿ, ಎಷ್ಟು ಜನ ಉಪಾಧ್ಯಾಯರನ್ನು ನೇಮಕ ಮಾಡಿದ್ದೇವೆ ಎಂದು ಗೋವಿಂದೇಗೌಡರು,ಬಚ್ಚೇಗೌಡರು ನಮ್ಮ ಜೊತೆ ಇದ್ದರು, ಎಷ್ಟು ಜನ ನೇಮಕ ಮಾಡಿದ್ದೇವೆ ಎಂದು ಅವರಿಗೆ ಗೊತ್ತಿದೆ ಹಾಗಾದರೆ ನಿಮ್ಮ Priorityಯಾವುದು? Which is your priority area?.ಇದಕ್ಕೆFinance Departmentನಲ್ಲೂ ಕೂಡಾ ಅಡೆತಡೆಗಳು ಇರಬಾರದೆಂದು ನಾವು ಹೇಳಿರುವುದು.ಹಣ ಬಿಡುಗಡೆ ಮಾಡುವುದಕ್ಕೆ, ಮೇಸ್ಟ್ರು ಗಳನ್ನು ನೇಮಕ ಮಾಡುವುದಕ್ಕೆ ಅಡ್ಡಿ ಮಾಡಬಾರದು ಎಂದು ಹೇಳಿರುವಂತಹದು.Health Department,Education Department ಮತ್ತೆ Police Department ಗಳಿಗೆFinanceಇಲಾಖೆ ಮೇಸ್ಟ್ರುಗಳನ್ನು ನೇಮಕ ಮಾಡುವುದಕ್ಕೆ ಆಗಲಿ,ಬೇರೆ ಕಾರ್ಯಕ್ರಮಗಳಿಗೆ ಆಗಲಿ ದುಡ್ಡುಇಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ ಅಥವಾ ಅದನ್ನು ವಿಳಂಬ ಮಾಡುವುದಕ್ಕೆ ಬರುವುದಿಲ್ಲ. ಅದು ನಿಮ್ಮ ಜವಾಬ್ದಾರಿ.Finance Department ನವರು ದುಡ್ಡು ಕೊಡಲಿಲ್ಲವೆಂದು ನೀವು Assembly ನಲ್ಲಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. Government ಎಂದರೆ joint responsibility. You are responsible as responsible as your Chief minister and the Chief Minister is as responsible as you. Soನಮಗೆ ಹಣ ಬಿಡುಗಡೆ ಮಾಡಲಿಲ್ಲ, ಅವರಿಗೆ ಫೈಲ್ ಕಳುಹಿಸಿದ್ದೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ. Youraise it in the cabinet. Get the approval in the cabinet. Recruit the teachers.

ಹಳ್ಳಿಗಾಡಿನಲ್ಲಿ ಕೊಡಲಿಲ್ಲವೆಂದರೆ, ಹಳ್ಳಿಗಾಡಿನ ಜನರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆ ಬಡವರ ಮಕ್ಕಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಮಕ್ಕಳು ಇಲ್ಲದೇ ಇರುವ ಕಡೆ ಸರ್ಕಾರಿ ಶಾಲೆಗಳನ್ನೆಲ್ಲಾ ಮುಚ್ಚುತ್ತೇವೆಂದು ಒಂದು ಕಡೆ ಹೇಳುತ್ತೀರಿ, ಇನ್ನೊಂದು ಕಡೆ ಮಕ್ಕಳು ಇರುವಲ್ಲಿ ಟೀಚರ್ಸ್ ಕೊಡುವುದಿಲ್ಲ. ಯಾವ ತರಹ ನೀವು ಸರ್ಕಾರವನ್ನು ನಡೆಸುತ್ತೀರಿ? This is most unfortunate.ಇದು ಯಾರ ಜವಾಬ್ದಾರಿ? Finance Departmentನನ್ನ ಹತ್ತಿರವಿಲ್ಲ, ಮಾನ್ಯ ಜಗದೀಶ ಶೆಟ್ಟರ್ ಹತ್ತಿರ ಇದೆ,ಇನ್ಯಾರ ಹತ್ತಿರನೋ ಇದೆ ಎಂದು ಹೇಳುವುದಕ್ಕೆ ಬರುವುದಿಲ್ಲ. It is a joint responsibility. ನಿಮ್ಮ ಕೈಲಿ ಮಾಡುವುದಕ್ಕೆ ಆಗುವುದಿಲ್ಲವೆಂದರೆ, ಯಾವುದೂ ಮಾಡುವುದಕ್ಕೆ ಆಗುವುದಿಲ್ಲವೆಂದು ನೆಪ ಹೇಳಿ. ಶಾಸಕರುಗಳು 2 ವರ್ಷದಿಂದ ಕೇಳುತ್ತಿದ್ದಾರೆ. 2 ವರ್ಷ ಬೇಕಾ ನೀವು ಟೀಚರ್ಸ್ ನೇಮಕ ಮಾಡುವುದಕ್ಕೆ? ತಾವು ತೆಗೆದು ನೋಡಿ 1994 ರಿಂದ 1999 ರವರೆಗೆ ಪ್ರತಿ ವರ್ಷ ಎಷ್ಟು ಟೀಚರ್ಸ್‌ಗಳನ್ನು ನೇಮಕ ಮಾಡಿದ್ದೇವೆಂದು. You take the report. 1ಲಕ್ಷದ 10 ಸಾವಿರ ಜನಕ್ಕೆ ನೇಮಕ ಮಾಡಿದ್ದೇವೆ. ಆಗ ಎಷ್ಟು ದುಡ್ಡು ಬೇಕಾದರೂ ತೆಗೆದುಕೊಳ್ಳಿ ಎಂದು ಕೊಟ್ಟಿದ್ದೇವೆ. Why it is not possible for your government?ಕೇಂದ್ರ ಸರ್ಕಾರ ಕೂಡ ನಿಮಗೆ ಸರ್ವ ಶಿಕ್ಷಣ ಅಭಿಯಾನ, ಇನ್ಯಾವುದೋ ಅಭಿಯಾನದಲ್ಲಿ ಕೊಡುತ್ತಿದೆ. ಹಾಗಾದರೆ ನೀವೇನು ಮಾಡುತ್ತಿದ್ದೀರಿ? ಬಿಸಿಯೂಟವನ್ನು ಕೇಂದ್ರ ಸರ್ಕಾರದವರು up to 7thವರೆಗೂ ಕೊಡುತ್ತಿದ್ದಾರೆ. ನಿಮ್ಮ ಕೈಯಲ್ಲಿ ಇಷ್ಟೂ ಮಾಡುವುದಕ್ಕೆ ಆಗುವುದಿಲ್ಲವೇ? ಟೀಚರ್ಸ್ ನೇಮಕ ಮಾಡುವುದಕ್ಕೆ ಆಗುವುದಿಲ್ಲವೇ? ಮಾಡುವುದಕ್ಕೆ ಆಗುವುದಿಲ್ಲವೆಂದರೆ, ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳಿಬಿಟ್ಟು ಹೋಗಿ. ಆದರೆ ಈ ತರಹ ಹಳ್ಳಿಗಾಡುಗಳಲ್ಲಿ ಅನ್ಯಾಯ ಮಾಡುವುದು, that is very bad.ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ನೀವು ಕೂಡಲೇ ನೇಮಕಾತಿಯನ್ನು ಮಾಡಿ.ಒಂದು time–bound ಕಾರ್ಯಕ್ರಮ ಹಾಕಿಕೊಳ್ಳಿ. ಇಂತಿಷ್ಟು ದಿವಸಗಳಲ್ಲಿ ನಾವು ನೇಮಕಾತಿಯನ್ನು ಮಾಡುತ್ತೇವೆಂದು ಹೇಳಿ ಅಥವಾ ತಕ್ಷಣ ಟೀಚರ್ಸ್ ಸಿಗದಿದ್ದರೆ retired teacher ಗಳನ್ನು appointಮಾಡಿಕೊಳ್ಳಿ. ಇಲ್ಲವೆಂದರೆ ಹೊರ ಗುತ್ತಿಗೆ ಆಧಾರದ ಮೇಲೆ ಮಾಡಿ. ಈಗ acdemic year ಶುರುವಾಗಿದೆ. ಕಳೆದ ವರ್ಷ ಹೋಯಿತು, ಅದರ ಹಿಂದಿನ ವರ್ಷ ಕೂಡ ನೇಮಕಾತಿ ಮಾಡಲಿಲ್ಲ. ನೀವು ಇದನ್ನೇ ನೆಪ

ಹೇಳಿಕೊಂಡು ಈ ವರ್ಷವೂ ಮುಗಿದು ಹೋದರೆ, ನಿಮ್ಮterm ಮುಗಿದೆ ಹೋಗುತ್ತದೆ Mr.ವಿಶ್ವೇಶ್ವರ ಹೆಗಡೆ ಕಾಗೇರಿರವರೆ.ನೋಡಿ ಈ ರಾಜ್ಯದ ಜನರ ಶಾಪ ಸುಮ್ಮನೆ ಬಿಡುವುದಿಲ್ಲ. ಇದು ರಾಜ್ಯದ ಜನರಿಗೆ ಮಾಡುವ ದ್ರೋಹ. ಇದಕ್ಕೆ ಇನ್ಯಾವ ಪದ ಬಳಸಬೇಕು ಎಂದು ನೀವೇ ಹೇಳಿ. ಕಾರಜೋಳರವರೆ ನಿಮಗೆ ಏನೂ ಅನ್ನಿಸುವುದಿಲ್ಲವೇ? 171 ಜನ ಟೀಚರ್ಸ್ ಇಲ್ಲ, 300 ಜನ ಟೀಚರ್ಸ್ ಇಲ್ಲ ಎಂದರೆ ಹೇಗೆ? ಹೋಗೆ ನಿಮಗೆ ಏನು ಅನಿಸುತ್ತೆ, ಅದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ್ (ಸಣ್ಣ ನೀರಾವರಿ ಸಚಿವರು): ಅವರು ಉತ್ತರ ಹೇಳುತ್ತಾರೆ, ಕೇಳಿ.

ಶ್ರೀ ಸಿದ್ದರಾಮಯ್ಯ: ಅವರು ಯಾವುದೇ ಒಂದು ಉತ್ತರ ಹೇಳಿ ಹೋಗುವುದು ಬೇರೆ. ನಿಮ್ಮ ಆತ್ಮಕ್ಕೆ ಮುಟ್ಟಿಕೊಂಡು ಹೇಳಿ. ಸುಮ್ಮನೇ ಸರ್ಕಾರ ಏನೋ ಒಂದು ಉತ್ತರ ಹೇಳುತ್ತದೆ, ಮಾನ್ಯ ಸಭಾಧ್ಯಕ್ಷರು ಆಯಿತು ಬಿಡಿರಿ, ಪರಿಶೀಲನೆ ಮಾಡುತ್ತಾರೆಂದು ಹೇಳಿದರೆ ಅಲ್ಲಿಗೆ ಮುಗಿದು ಹೋಯಿತಾ? what has been done?ಈ ಎರಡು ವರ್ಷದಿಂದ ಕೊಟ್ಟಿಲ್ಲವೆನ್ನುವುದು it is a fact. Why you have not provided?is it not your duty? Is it not the primary duty of the government? Is not the government answerable to the house and in turn to the people of the Karnataka?ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ, ನಾನು ಟೀಕೆ ಮಾಡುವುದಕ್ಕೋಸ್ಕರ ಮಾಡುತ್ತಿಲ್ಲ. ದಯಮಾಡಿ ¨be serious about this.ಗಂಭೀರವಾಗಿ ಯೋಚನೆ ಮಾಡಿ. ಅದನ್ನುFinance Department ನವರು ಕೊಡಲೇ ಬೇಕು.Because it is priority subject. ಅದಕ್ಕೆ ಇಲ್ಲವೆಂದು ಏಕೆ ಹೇಳುತ್ತಾರೆ?.

ಕುಳಿತುಕೊಂಡು ನೀವು ಅದನ್ನು ಮಾಡಿಸಿ, ಕೂಡಲೆ recruitಮಾಡಿ. ನೀವು ಇಂತಿಷ್ಟು ಸಮಯದಲ್ಲಿ ಟೀಚರ್ಸ್recruit ಮಾಡಿ ಎಲ್ಲೆಲ್ಲಿ ಖಾಲಿ ಇದೆ ಅಲ್ಲಿ ಭರ್ತಿ ಮಾಡುತ್ತೇವೆಂದು ಹೇಳಿ.Every year 10% retire ಆಗುತ್ತಾರೆ.every year ನೀವು recruit ಮಾಡುತ್ತಿರಲೇ ಬೇಕು whether the MLAs demand it or not,it is a continuous process.ದಯವಿಟ್ಟು ಅದನ್ನು ಮಾಡಿ. ಬೇರೆ ಏನೋ ಉತ್ತರ ಕೊಡುವುದಕ್ಕೋಸ್ಕರ ಅಥವಾ ಸರ್ಕಾರdefend ಮಾಡಿಕೊಳ್ಳುವುದಕ್ಕೋಸ್ಕರ ಮಾಡುವುದಲ್ಲ,the problem is to be solved.ಅದಕ್ಕೆ ನೀವು ಕ್ರಮ ತೆಗೆದುಕೊಳ್ಳಿ.

ಉಪಾಧ್ಯಕ್ಷರು: ಮಾನ್ಯ ರೇವಣ್ಣನವರೆ, ಈಗ ತಮ್ಮ ವಿಚಾರ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಪಿ. ಯು. ಕಾಲೇಜು resultಅವರು ಹೇಳಲಿ. ಸರ್ಕಾರಿ ಕಾಲೇಜುಗಳಲ್ಲಿ 90–100% resultsಬರುತ್ತಿದೆ. ನಮ್ಮಲ್ಲೇ 100% result ಇದೆ. ಆದರೆ ನಮ್ಮಲ್ಲಿ ಏನಾಗಿದೆ ಎಂದರೆ, ಕೆಲವು ಕಡೆ ಹಳ್ಳಿಗಳಲ್ಲಿteachersಅನ್ನು ನಾವೆ ದುಡ್ಡು ಕೊಟ್ಟು ನೇಮಕ ಮಾಡುವಂತಾಗಿದೆ. ಆ ರೀತಿಯ ಪರಿಸ್ಥಿತಿ ಇದೆ. ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಬೇಕು.ಹಣಕಾಸಿನ ಖಾತೆಯನ್ನು ಹೊಂದಿರುವ ಮಾನ್ಯ ಮುಖ್ಯಮಂತ್ರಿಗಳೇಇದರ ಬಗ್ಗೆ ಉತ್ತರ ಕೊಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಳೇ ನಾನು ಇದನ್ನು ಮಾಡುತ್ತೇನೆ ಎಂದು ಹೇಳ ಬೇಕಾಗಿತ್ತು. ಆದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿಲ್ಲ. ಬೆಳಿಗ್ಗೆ ಮಾನ್ಯ ಯಡಿಯೂರಪ್ಪನವರು 2500 ಕೋಟಿ ರೂ.ಗಳಷ್ಟು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದರು. ಇದನ್ನೂ ಹೇಳಿ. ಮಾನ್ಯ ಮುಖ್ಯಮಂತ್ರಿಗಳ ಕೈಯ್ಯಲ್ಲಿ ಈ ಬಗ್ಗೆಯೂ ಹೇಳಿಸಿ .ಪರಿಸ್ಥಿತಿ ಈ ರೀತಿ ಇದೆ, ಆದರೆ ಹಣಕಾಸಿನ ಇಲಾಖೆಯವರು ನೇಮಕಾತಿ ಮಾಡಲು ನಮಗೆ ಅನುಮತಿ ಕೊಡುತ್ತಿಲ್ಲ ಎಂದು ಅವರಿಗೆ ಹೇಳಿ. ಇಲ್ಲಿ ಬಡವರ ಮಕ್ಕಳೇ ಓದುವುದು. ಸರ್ಕಾರಿ ಶಾಲೆಗಳಲ್ಲಿ ಮಾನ್ಯ ಸಿದ್ದರಾಮಣ್ಣನವರ ಮಕ್ಕಳಾಗಲಿ ಅಥವಾ ನನ್ನ ಮಕ್ಕಳಾಗಲಿ ಓದಲಿಕ್ಕೆ ಬರುವುದಿಲ್ಲ. ಆದ್ದರಿಂದ, ದಯಮಾಡಿ ಕೂಡಲೇ ನೇಮಕಾತಿ ಮಾಡಿ. ಹೊಳೆನರಸೀಪುರ ಟೌನ್‌ನ ಶಾಲೆಯಲ್ಲಿ 1000 ಜನ ಹೆಣ್ಣುಮಕ್ಕಳಿದ್ದಾರೆ. ಆದರೆ ಅಲ್ಲಿ 16 ಜನ ಟೀಚರ್ಸ್ ಹುದ್ದೆ ಖಾಲಿ ಇದೆ, ಇದು ಒಂದು ಕಡೆಯ ಪರಿಸ್ಥಿತಿಯಲ್ಲ, ಇಡಿ ರಾಜ್ಯದಲ್ಲಿ ಈ ರೀತಿ ಇದೆ. ನೀವು ಯಾವುದಕ್ಕೆ ಆದ್ಯತೆ ಕೊಡದಿದ್ದರೂ,first ಶಿಕ್ಷಕರ ನೇಮಕಾತಿ ಮಾಡುವುದಕ್ಕೆ ಕೂಡಲೇ ಅನುಮತಿ ಕೊಡಿ.ಇನ್ನು ಕಾಲೇಜುಗಳಿಗೆ ಕಟ್ಟಡಗಳೂ ಬೇಕು. ಮಾನ್ಯ ಕುಮಾರಸ್ವಾಮಿ–ಯವರ ಕಾಲದಲ್ಲಿ 2500 ಟೀಚರ್ಸ್ ಅನ್ನುappointmentಮಾಡಲು permissionಕೊಟ್ಟಿದ್ದರು ಅಲ್ಲದೆFirst Grade college ಗಳಲ್ಲಿ 4500 teachersಅನ್ನುappointment ಮಾಡಲುpermission ಕೊಡಿಸಿದ್ದೆವು. ಶಾಲಾ ಕಟ್ಟಡಗಳಿಗೆ ನಬಾರ್ಡ್ ಮೂಲಕ 1000 ಕೋಟಿ ರೂ.ಗಳನ್ನು ನಾನಿದ್ದಾಗ ಕೊಡಿಸಿದ್ದೆ. ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಕೇಂದ್ರ ಸರ್ಕಾರದಿಂದ 60,000 ಜನ teachersಅನ್ನು appointment ಮಾಡುವುದಕ್ಕೆ ಅನುಮತಿ ಕೊಟ್ಟಿದ್ದಾರೆ.ನೀವು ಬೇಕಾದರೆ ದಾಖಲೆಗಳನ್ನು ತೆಗದು ನೋಡಿ, ನಾನೇನು ಸುಳ್ಳು ಹೇಳುವುದಿಲ್ಲ. ಯಾವುದೇ ಕೆಲಸ ಕಾರ್ಯಗಳಿರಲಿ, ನೀವು

ದಯಮಾಡಿ ಟೀಚರ್ಸ್ ಅನ್ನು ಆದ್ಯತೆ ಮೇಲೆ ನೇಮಕಾತಿ ಮಾಡಿ. PU college ಇರಬಹುದು,ಅಥವಾ First Grade Collegeಇರಬಹುದು,ಖಾಲಿ ಇರುವ 100% ಶಿಕ್ಷಕರ ಹುದ್ದೆಗಳನ್ನು ನೇಮಕ ಮಾಡುವುದಕ್ಕೆ ನೀವು ಕ್ರಮ ತೆಗೆದುಕೊಳ್ಳಬೇಕು. Contractಆಧಾರದ ಮೇಲೆ ತೆಗೆದುಕೊಳ್ಳಬಾರದು.Contractಆಧಾರದ ಮೇಲೆ ತೆಗೆದುಕೊಂಡರೆ, 10 ಸಾವಿರ ರೂ.ಗಳ ಸಂಬಳ ಇದ್ದರೆ. ಅವರಿಗೆ ತಿಂಗಳಿಗೆ ಕೇವಲ 5 ಸಾವಿರ ರೂ.ಗಳ ಸಂಬಳವನ್ನು ಮಾತ್ರ ಕೊಡುತ್ತಾರೆ. ತಾತ್ಕಾಲಿಕವಾಗಿ ತೆಗೆದುಕೊಳ್ಳುವುದೂ ಸಹ ಸರಿಯಿಲ್ಲ. ಈಗ ಹೋಟೆಲ್‌ನಲ್ಲಿ ಲೋಟ ತೊಳೆಯುವವನಿಗೆ ತಿಂಗಳಿಗೆ 5ಸಾವಿರ ರೂ.ಗಳ ಸಂಬಳವನ್ನು ಕೊಡುತ್ತಾರೆ. ಹೀಗಿರುವಾಗ ನೀವು M.A,Mcom, ಅಥವಾ B.A,Bed, ಮಾಡಿರುವವರಿಗೆ ಸಹ 5 ಸಾವಿರ ರೂ.ಗಳ ಸಂಬಳ ಕೊಟ್ಟರೆಹೇಗೆ? ಅದನ್ನೂ ಕೂಡ 3,500/–ರೂ.ಗಳು ಇದ್ದದ್ದನ್ನು 5 ಸಾವಿರ ರೂ.ಗಳಿಗೆ ನಾವು ಹೆಚ್ಚಿಸಿದ್ದೆವು.ಯಾರ್ಯಾರೋ ತಿನ್ನುತ್ತಿದ್ದಾರೆ, ದಯಮಾಡಿ ಅವರಿಗೆ 10 ಸಾವಿರ ರೂ.ಗಳನ್ನು ಕೊಡಿ ,ಏನೂ ಆಗುವುದಿಲ್ಲ. ದಯಮಾಡಿ ಖಾಯಂ ಶಿಕ್ಷಕರನ್ನು ನೇಮಕಾತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು :– ಮಾನ್ಯ ಸದಸ್ಯರು ಹೇಳಿದ್ದು ನನಗೆ ಅರ್ಥವಾಯಿತು. ಮಾನ್ಯ ಶಿಕ್ಷಣ ಸಚಿವರೆ, ತುಂಬಾ ಗಂಭೀರವಾಗಿ ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಿ. ಇದನ್ನು ಪರಿಹರಿಸುವ ನಿಟ್ಟಿನಲ್ಲಿ ತಮಗೆ ಉತ್ತರ ಕೊಡಲಿಕ್ಕೆ ಆಗಲಿಲ್ಲವೆಂದರೆ, ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಹೇಳಿಸಿ. Financeಸೇರಿದಂತೆ ಇದಕ್ಕೆ ಸಂಬಂಧಪಟ್ಟ ಯಾವುದೇ ಇಲಾಖೆ, ಇದನ್ನು ತಾರತಮ್ಯ ಮಾಡುವಂತಹ ಅವಶ್ಯಕತೆ ಇಲ್ಲ ಇದನ್ನು priorityಮೇಲೆ ಕೊಡಬೇಕು. ಈಬಗ್ಗೆ ಸರ್ಕಾರಕ್ಕೆ ಸ್ಪಷ್ಟವಾದ ಸೂಚನೆಯನ್ನು ಪೀಠದ ಕಡೆಯಿಂದ ಕೊಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :–ಮಾನ್ಯ ಉಪಾಧ್ಯಕ್ಷರೆ, ಸದನದ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ, ಎಲ್ಲಾ ಹಿರಿಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಬಹುಶ: ಇಲ್ಲಿ ಯಾರ ಒಬ್ಬ ಸದಸ್ಯರನ್ನು ನೀವು ಮಾತನಾಡಿಸಿದರೂ, ನಮ್ಮೆಲ್ಲಾ ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಒಳಗೊಂಡಂತೆ, ಎಲ್ಲಾ ಕಡೆಗೂ ಶಿಕ್ಷಕರ ಕೊರತೆ ಇರುವುದನ್ನು ನಾವೆಲ್ಲರೂ ಅನುಭವಿಸುತ್ತಿದ್ದೇವೆ, ನಾವೆಲ್ಲರೂ ಅದನ್ನು ಹೇಳುತ್ತಿದ್ದೇವೆ. ಶಿಕ್ಷಕರು ನಮಗೆ ಬೇಕು.

ಶ್ರೀ ಸದ್ದರಾಮಯ್ಯ:–ಮಾನ್ಯ ಕಾಗೇರಿಯವರೆ, ನೀವು ಈಗstatement ಓದಿದ್ದೀರಲ್ಲಾ, ಆ ಉತ್ತರದ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಕೊಡಬಹುದಲ್ಲವೇ? ಉತ್ತರದ ಪ್ರತಿಯನ್ನು ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾವು ತಲಪಿಸಿದ್ದೇವೆ.ಏನಾದರೂ ಕೊರತೆಯಿಂದಾಗಿ ತಲುಪಿಲ್ಲವೆಂದರೆ, ಅದನ್ನು ತಲುಪಿಸುವ ಕೆಲಸ ಮಾಡುತ್ತೇವೆ. ಇದನ್ನುನಾವು copyಮಾಡಿ ಕಳುಹಿಸಿದ್ದೇವೆ. ಅಲ್ಲಿ ಎಲ್ಲಿಯಾದರೂ communication gapನಿಂದಾಗಿ ಉತ್ತರದ ಪ್ರತಿ ಅವರಿಗೆ ಸಿಕ್ಕಿಲ್ಲದಿರಬಹುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಎಲ್ಲಿ ಉತ್ತರ ಬಂದಿದೆ? ಈಗ ಉತ್ತರದ ಪ್ರತಿ ಕೊಡುತ್ತಿದ್ದೀರಿ. ಇದು secretariatನ ಬೇಜವಾಬ್ದಾರಿಯಾಗಿದೆ.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ಈಬಗ್ಗೆ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇದು ಬಾಗೇಪಲ್ಲಿಗೆ ಸೀಮಿತವಾಗಿದೆ. ಇದು ಇಡೀ ರಾಜ್ಯಲ್ಲೆ ಅನ್ವಯಿಸುವಂತಹ ಪ್ರಶ್ನೆ ಆಗಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :–ಉತ್ತರ ಕೊಟ್ಟಿದ್ದೇವೆ. ಉತ್ತರ ತಮಗೆ ಬಂದಿಲ್ಲ ಎನ್ನುವುದಾದರೆ, ಎಲ್ಲಿಯಾದರೂ ಗ್ಯಾಪ್ ಆಗಿರಬಹುದು.ಅದನ್ನು ಸರಿಪಡಿಸುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಮಿನಿಸ್ಟರ್‌ರವರು ಆರೀತಿ ಹೇಗೆ ಹೇಳುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದನ್ನು ಸರಿಪಡಿಸುತ್ತೇವೆ ಸರ್.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಕಾಗೇರಿಯವರೆ, ತಾವು ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. ಅದು ಎಲ್ಲೋ ಇದೆ, ಇಲ್ಲೇ ಎಲ್ಲೋ ಇದೆ, ಅದು ಇಲ್ಲೇ ಎಲ್ಲೋ ತಪ್ಪಿಸಿಕೊಂಡು ಬಿಟ್ಟಿದೆ ಎಂದು ನೀವು ಹೇಳಿವುದಲ್ಲೆ ಬರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಉತ್ತರದ copy ಯನ್ನು ತಮಗೆ ತಲುಪಿಸುತ್ತೇವೆ.copyಯನ್ನು ತಲುಪಿಸುವುದರ ಬಗ್ಗೆ----

ಶ್ರೀ ಸಿದ್ದರಾಮಯ್ಯ:– ಇದು Assembly.ನೀವು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದೀರಿ. As Government, you are replying.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಸಿದ್ದರಾಮಯ್ಯನವರೆ, ನೀವು ಇಷ್ಟೊಂದು ಗಂಭೀರವಾದಂತಹ ರೀತಿಯಲ್ಲಿ ಹೇಳಿದರೆ, ನಾನು ಗಂಭೀರವಾಗಿ ಬೇರೆ ರೀತಿಯಲ್ಲಿ ಹೇಳಬೇಕಾಗುತ್ತದೆ. 1994ರಿಂದ ನಾನು ಇಲ್ಲಿದ್ದೇನೆ. ನೀವು ಎಷ್ಟು ಸಲ ಉತ್ತರ ಕೊಟ್ಟು, ಏನೇನು ಹೇಳಿದ್ದೀರಿ ಎಂಬುದು ನನಗೂ ಗೊತ್ತಿದೆ. ಈಗ ಅದೆಲ್ಲಾಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಆಯಿತು, ಅದನ್ನೆಲ್ಲಾ ತೆಗೆಯಿರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಉತ್ತರವನ್ನು ಇಲ್ಲಿ ಓದಿ ಹೇಳಿಯಾಗಿದೆ.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಶಿಕ್ಷಣ ಮಂತ್ರಿಗಳೆ, ನೀವು ಉತ್ತರ ಓದಿ ಹೇಳಿದ್ದರೂ ಸಹ,ಅದರ ಪ್ರತಿಯನ್ನು ಕೊಡಬೇಕಿತ್ತು. ಅದರಲ್ಲಿ lapsesಆಗಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಉತ್ತರವನ್ನು ನಾನು ಬೆಳಿಗ್ಗೆಯೇ ಸಹಿ ಮಾಡಿ ಕಳುಹಿಸಿದ್ದೇನೆ. ಇದು ನಮ್ಮ ಇಲಾಖಾ ಕಛೇರಿಯಲ್ಲಿ

ಆಗಿರಬಹುದು ಅಥವಾ ಎಲ್ಲೇ ಆಗಿರಬಹುದು, ಅದು ಇಲ್ಲಿಗೆ ಸರಿಯಾಗಿ ಬರದಿರುವುದಕ್ಕೆಕಾರಣ ತಿಳಿದು ಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ:–ಅವರನ್ನು suspendಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸರಿಯಾಗಿ ಬರದಿರುವುದಕ್ಕೆ ಕಾರಣವೇನು? ಎಂದು ನಾನು ತಿಳಿದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಉತ್ತರದ ಪ್ರತಿಯನ್ನು ತಲುಪಿಸಬೇಕಾಗಿರತಕ್ಕ ಜವಾಬ್ದಾರಿ ನಮ್ಮೆಲ್ಲರದಾಗಿದೆ. ಅದನ್ನು ನಾನು ನಿರ್ಲಕ್ಷ್ಯ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೋ, ಅವರನ್ನು ಸಸ್ಪೆಂಡ್ ಮಾಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಎಲ್ಲಿ ತಪ್ಪಾಗಿದೆ ಎಂದು ನೋಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:–you have read the statement. Where is that copy? It is the duty of the Government to give ಉತ್ತರದ copy ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಉತ್ತರದ ಪ್ರತಿ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಎಲ್ಲಿ ಕೊಟ್ಟಿದ್ದೀರಿ?

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಪ್ರತಿ ಪಕ್ಷದ ನಾಯಕರೆ, ಇಲ್ಲಿ lapses ಆಗಿದೆ. ಕೊನೆಗಳಿಗೆಯಲ್ಲಿ ಉತ್ತರವನ್ನು ಕೊಡುತ್ತಿದ್ದಾರೆ. ಇಲ್ಲಿ ಅಧಿಕೃತವಾಗಿ ಬರಬೇಕಾಗಿದ್ದ ಉತ್ತರ ಬಂದಿಲ್ಲ. ಅದಕ್ಕೋಸ್ಕರವಾಗಿ ಇದನ್ನು pending

ಇಡಬೇಕೆಂದು ಯೋಚನೆ ಮಾಡುತ್ತಿದ್ದೆವು. ಆದರೂ ಉತ್ತರ ಕೊಡುತ್ತಾರೆ ಎನ್ನುವಂತಹ ಹಿನ್ನೆಲೆಯಲ್ಲಿ ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದೆವು.ಸಮಸ್ಯೆಯ ಗಂಭೀರತೆಯನ್ನು ಅರ್ಥ ಮಾಡಿಕೊಂಡು, ಉತ್ತರಿಸಲಿಕ್ಕೆ ಅವಕಾಶ ಕೊಟ್ಟಿದ್ದೆವು ಈಗ ಈ ಒಂದುlapse ಎಲ್ಲಿಯಾಗಿದೆ, ಅದನ್ನು ಸರಿಪಡಿಸುವ ನಿಟ್ಟಿನಲ್ಲಿ ತಾವು ಕ್ರಮ ತೆಗದುಕೊಳ್ಳಿ. ಎರಡನೆಯದಾಗಿ,ನಿಮಗೆ ಸ್ಪಷ್ಟವಾಗಿರುವಂತಹ ಒಂದು ನಿರ್ದೇಶನವನ್ನು ನಾನು ಕೊಡುತ್ತಿದ್ದೇನೆ ಈ ಸಮಸ್ಯೆಯನ್ನು ತಾವು ಬಗೆಹರಿಸಬೇಕು. ನಮಗೆ ಇಲ್ಲಿ ಉತ್ತರ ಬಂದಿಲ್ಲ ಎಂಬುದೇ ಮುಖ್ಯವಾಗುವುದು ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಸಮಸ್ಯೆ ಬಗೆಹರಿಸುವ ಬಗ್ಗೆಯೇ ಹೇಳುತ್ತೇನೆ.

ಉಪಾಧ್ಯಕ್ಷರು:– ಆಯಿತು ,ಅದರ ಬಗ್ಗೆ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಉಪಾಧ್ಯಕ್ಷರೆ, ನಾನು ಎರಡು ವಿಚಾರಗಳನ್ನು ಸ್ಪಷ್ಟಪಡಿಸುತ್ತೇನೆ. ಮೊದಲನೆಯದಾಗಿ, ಈ ನಿಯಮ 73ರ ಅಡಿಯಲ್ಲಿ ಮಾನ್ಯ ಸಂಪಂಗಿಯವರು ಏನೊದು, ಪ್ರಶ್ನೆಯನ್ನು ಕೇಳಿದ್ದರೋ, ಅದಕ್ಕೆ ಉತ್ತರವನ್ನು ನಾನು ಸಹಿ ಮಾಡಿ ಕೊಟ್ಟಿದ್ದೇನೆ. ಅದು ಯಾವುದೋ ಕಾರಣಗಳಿಂದ, ಅದು ಯಾವ ಕಾರಣ ಎಂದು ನಿಂತಲ್ಲಿ ನನಗೆ ಗೊತ್ತಾಗುತ್ತಿಲ್ಲ, ನಾನು ಅದನ್ನು ನೋಡುತ್ತೇನೆ. ನಮ್ಮ ಇಲಾಖಾ ಕಛೇರಿಯಿಂದ ನಿಮ್ಮ ಕಛೇರಿಗೆ ತಲುಪಿದೆಯೋ, ಇಲ್ಲವೋ? ತಲುಪಿಲ್ಲದಿದ್ದಲ್ಲಿ, ಎಲ್ಲಿ ನಿರ್ಲಕ್ಷವಾಗಿದೆ?ಎಂದು ನೋಡುತ್ತೇನೆ. ಈ ರೀತಿ ನಿರ್ಲಕ್ಷ್ಯ ಯಾರೂ ಮಾಡಬಾರದು. ಇದರ ಬಗ್ಗೆ ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇಲ್ಲಿ ಯಾವುದೇ ಕಾರಣಕ್ಕೂ ಉತ್ತರವನ್ನು ಮರೆಮಾಚಬೇಕು, ಕೊಡಬಾರದು ಎನ್ನುವಂತಹ ಉದ್ದೇಶ ಸರ್ಕಾರಕ್ಕಿಲ್ಲ. ನಾವು ಪಾರದರ್ಶಕವಾಗಿ ಏನು ಉತ್ತರ ಇದಯೋ, ಅದನ್ನು ಕೊಡುತ್ತೇವೆ, ಕೊಟ್ಟಿದ್ದೇನೆ, ಕೊಡುತ್ತೇನೆ. ಎಲ್ಲಿ lapsesಇದೆಯೋ, ಅದನ್ನು ಸರಿಪಡಿಸುವುದಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ. ಮುಂದೆ ಹೀಗೆ ಆಗದಿರುವಂತೆ ನೋಡಿಕೊಳ್ಳುತ್ತೇವೆ. ಇದೊಂದು ಭಾಗ. ಇನ್ನು ಎರಡನೇ ಭಾಗ ಏನೆಂದರೆ, ಇಲ್ಲಿ ಎಲ್ಲಾ ಸದಸ್ಯರ ಬಗ್ಗೆ ನಾನು ಹೇಳುತ್ತಿದ್ದೆ. ಶಿಕ್ಷಕರ ಕೊರತೆ ಇದೆ ಎನ್ನುವಂಥದ್ದು ಸಾರ್ವತ್ರಿಕವಾಗಿ ಎಲ್ಲಾ ಸದಸ್ಯರ ಅಭಿಪಾಯವಾಗಿದೆ. ಆದರೆ ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಲಿಕ್ಕೆ ನಾನು ಬಯಸುತ್ತೇನೆ. ನಮ್ಮ ಸರ್ಕಾರದಲ್ಲಿ ಶಿಕ್ಷಣ ಆದ್ಯತೆ ಕ್ಷೇತ್ರವಾಗಿದೆ. ಆದ್ಯತೆಯ ಕ್ಷೇತ್ರವಾಗಿ ಇದಕ್ಕೆ ನಾವು ಎಲ್ಲಾ ರೀತಿಯ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ.ನಾವು ಇದುವರೆಗೂ ..

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್:– ಎಲ್ಲಿ ಆದ್ಯತೆ ಕೊಟ್ಟಿದ್ದೀರಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :–ಒಂದು ನಿಮಿಷ, ನಾನು ನನ್ನ ಉತ್ತರವನ್ನು ಮುಗಿಸಿ ಬಿಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು :–ಮಾನ್ಯಸಚಿವರು ಉತ್ತರ ಹೇಳಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈಗ ಸರ್ಕಾರದ ಆದ್ಯತಾ ಕ್ಷೇತ್ರ ಶಿಕ್ಷಣ ಕ್ಷೇತ್ರವಾಗಿದೆ.ಇಡೀ ದೇಶದಲ್ಲಿ ಇನ್ನೆಲ್ಲೂ ಕೊಡದಿರುವಂತಹ ಬಜೆಟ್ allocation ಶೇ.15%ರಷ್ಟು; 12,500 ಸಾವಿರ ಕೋಟಿ ರೂ.ಗಳನ್ನು ನಾವು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನೀವು ಹೇಳುವಾಗ ಉಳಿದೆಲ್ಲವನ್ನೂ ಹೇಳಿ ಹೇಳಲಿಲ್ಲವೇ ನಾನು ಹೇಳುವಾಗ ಎಲ್ಲವನ್ನೂ ಹೇಳಿ, ಉತ್ತರ ಕೊಡುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಏನು ಹೇಳುತ್ತೇನೆ ಎನ್ನುವುದರ ಬಗ್ಗೆ ತಾವು ತಾಳ್ಮೆಯಿಂದ ಕೇಳಬೇಕು. ಎರಡು ನಿಮಿಷದಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ. ಸರ್ಕಾರದ ಪರವಾಗಿ ನಾನು ನಿಂತು ಹೇಳುವಾಗ ನೀವು ಕೇಳಬೇಕು ನೀವು ಹೇಳಿದ್ದನ್ನು ಕೇಳಿಸಿಕೊಂಡಿದ್ದೇನೆ. ನಾನೂ ಸಹ ನಿಮ್ಮಂತೆ ಉಳಿದಿದ್ದೆಲ್ಲವನ್ನೂ ಹೇಳಿಯೇ ಹೇಳುತ್ತೇನೆ. ನಿಮ್ಮ ಅಭಿಪ್ರಾಯ, ಭಾವನೆಗಳು ಏನಿವೆಯೋ, ಅದಕ್ಕೆ ಉತ್ತರ ಹೇಳುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನೀವು ಹೇಳಿದ್ದನ್ನೆಲ್ಲಾ ನಾನು ಕೇಳಿಸಿಕೊಂಡಿದ್ದೇನೆ.1994–2000ರವರೆಗೆ 1ಲಕ್ಷ ಜನರನ್ನು ನೇಮಕಾತಿ ಮಾಡಿದ್ದೇವೆಂದು ನೀವು ಹೇಳಿದಿರಿ. ನೀವು ನೇಮಕಾತಿ ಮಾಡಿಕೊಂಡಿದ್ದೀರಿ.

ಅದರಲ್ಲಿ ರಾಜ್ಯದ್ದು ಎಷ್ಟು, ಕೇಂದ್ರದ್ದು ಎಷ್ಟು ಎಂಬ ಲೆಕ್ಕಚಾರವೆಲ್ಲಾ ಬೇಡಿ. ಒಟ್ಟಿನಲ್ಲಿ ನೀವು ಆಗ ನೇಮಕಾತಿ ಮಾಡಿಕೊಂಡಿದ್ದೀರಿ. ಅದರಲ್ಲಿ ನಮ್ಮ ರಾಜ್ಯದ shareಸಹ ಇತ್ತು. ನಮ್ಮ ಸರ್ಕಾರದಲ್ಲೂ ಸಹ ಶಿಕ್ಷಣಕ್ಕೆ ಆದ್ಯತೆಯನ್ನು ಕೊಟ್ಟಿದ್ದೇವೆ. ಸುಮಾರು 20 ಸಾವಿರ ಶಿಕ್ಷಕರ ನೇಮಕಾತಿಯನ್ನು ನಾವುಮಾಡಿದ್ದೇವೆ, ನಿವೃತ್ತಿ ವಯಸ್ಸನ್ನು 58 ರಿಂದ 60 ವರ್ಷಗಳವರೆಗೆ ಏರಿಸಿದ್ದರಿಂದ, 2ವರ್ಷಗಳ ಕಾಲ ನಿವೃತ್ತಿ ಇರಲಿಲ್ಲ ಎಂಬುದೂ ಸಹ ನಮಗೆ ಗೊತ್ತಿದೆ. ಇಡೀ ದೇಶದಲ್ಲಿ,ಕರ್ನಾಟಕದಲ್ಲಿ Student : Teacher ratio is one of the best.ಅದು 1:28 ಇದೆ.R T Eನಲ್ಲಿ1:30 ಎಂದು ಹೇಳಿರುವಾಗ, ಕರ್ನಾಟಕದಲ್ಲಿ Student:Teacher ratio1:28ಇದೆ. ಒಳ್ಳೆಯ ಸಂಗತಿಗಳಿದೆ.ಒಂದು ನಿಮಿಷ ನಾನು ಮುಗಿಸುತ್ತೇನೆ ಮುಗಿಸಿದ ನಂತರ ತಾವು ಹೇಳಿ.ನಾನು ಹೇಳುವ ತನಕ ತಾವು ಕೇಳಬೇಕು.

ಶ್ರೀ ಸಿದ್ದರಾಮಯ್ಯ:you do not mix up the things.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೇ, ಅವರು ಉತ್ತರ ಹೇಳಲಿ.

ಶ್ರೀ ಸಿದ್ದರಾಮಯ್ಯ:ಮಾನ್ಯ ಹಾಲಪ್ಪನವರೇ, ನಿಮ್ಮ ಊರಿನಲ್ಲಿ ಮೇಸ್ಟ್ರುಗಳು ಇಲ್ಲ ಎಂದು ಹೇಳಿದ್ದೀರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ) : ನಾವೇ ಒಪ್ಪಕೊಳ್ಳುತ್ತಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೇ, ಮಾನ್ಯ ಮಂತ್ರಿಗಳು ಉತ್ತರ ಕೊಡಲಿ, ಮತ್ತೆ ತಾವು clarificationಕೇಳಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಚಿವರು ಇಷ್ಟೇ ಹೇಳಿ. ಈ ಸಮಸ್ಯೆ ಪರಿಹಾರ ಕಾಣುವಂತಲೇಹೇಳಿ.

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ: ಸಾರ್,ಒಂದೇ ಶಬ್ದದಲ್ಲಿ ಅವರೂ ಹೇಳಲಿಲ್ಲ. ನಾನೂ ಹೇಳುವುದಕ್ಕೆ ಆಗುವುದಿಲ್ಲ. ಸರ್ಕಾರವಾಗಿ ನಾನು

ಉತ್ತರವನ್ನು ಕೊಡುವಾಗ ತಮ್ಮ ಹತ್ತಿರ ಸಮಯಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.ನಾನು ಬಹಳ ಸಮಯವನ್ನು ತೆಗೆದುಕೊಳ್ಳುತ್ತಿಲ್ಲ. ಆದರೆ ನಾನು ಇರುವ ಪರಿಸ್ಥಿತಿಯನ್ನು ಹೇಳಬೇಕಾದದ್ದು,ರಾಜ್ಯದ ಶಿಕ್ಷಣ ಸಚಿವನಾಗಿ, ಸರ್ಕಾರದ ಪರವಾಗಿ ನನಗೆ ಜವಾಬ್ದಾರಿ ಇದೆ.ನಾನು ನನ್ನ ಕರ್ತವ್ಯ ವೆಂದು ಭಾವಿಸಿಕೊಂಡು ಹೇಳುತ್ತಿದ್ದೇನೆ. ಹಾಗಾಗಿ ಎರಡು ವರ್ಷ ನಿವೃತ್ತಿ ವಯಸ್ಸನ್ನು ಹೆಚ್ಚಿಗೆ ಮಾಡಿರುವುದರಿಂದ ನಿವೃತ್ತಿ ಇರಲಿಲ್ಲ ಎನ್ನುವುದು ಒಂದು ಕಾರಣ.ಇತ್ಯಾದಿ ಕಾರಣಗಳೂ ಏನೇ ಇರಲಿ. ನಾವು ಅಗತ್ಯ ಇರುವಾಗ ಶಿಕ್ಷಕರನ್ನು ನೇಮಕಾತಿ ಮಾಡಿದ್ದೇವೆ.ಈಗಲೂ 1700 ಜನ ಉಪನ್ಯಾಸಕರನ್ನು ಮಾಡುತ್ತಿದ್ದೇವೆ. 3400 ಜನ ಹೈಸ್ಕೂಲು ಶಿಕ್ಷಕರ ನೇಮಕಾತಿ ವಿಚಾರವಾಗಿ ಪರೀಕ್ಷೆಗಳೆಲ್ಲಾ ಆಗಿದೆ. ನಾನು ಇತ್ಯಾದಿಗಳೆಲ್ಲವನ್ನೂ ಹೇಳಿದ್ದೇನೆ. ಈಗ ನಮಗೆ ಪ್ರೈಮರಿ ಒಳಗೂ 1:28 ಇದೆ. Bestಇದೆ ಎಂದು ಹೇಳಿದ್ದೇನೆ. ಆದರೂ ಶಿಕ್ಷಕರ ಕೊರತೆ ಇದೆ .ನಾನು ಅದನ್ನು ಹೇಳುತ್ತಿದ್ದೇನೆ. ತಾಳ್ಮೆಯಿಂದ ಕೇಳಿದರೆ ಅದರ ಸ್ಪಷ್ಟತೆ ಬರುತ್ತದೆ. ಶಿಕ್ಷಕರ ಕೊರತೆ ಇದೆ, ಏಕೆ ಶಿಕ್ಷಕರ ಕೊರತೆ ಇದೆ? ಮಲೆನಾಡು, ಕರಾವಳಿ ಮತ್ತು ಗಡಿಭಾಗದ ಜಿಲ್ಲೆಗಳಲ್ಲಿ ಮತ್ತು ಹೆಚ್ ಪಿ ಎಸ್ ನಲ್ಲಿ ಮಿನಿಮಮ್ ಶಿಕ್ಷಕರು ಇರಲೇಬೇಕು. ಹಾಗಾಗಿ 1:28 ಇದೆ ಎಂದರೆ ಇದು average1:28 ratioಇದೆ ಎಂಬ ಪರಿಸ್ಥಿತಿ ಇಲ್ಲ. ಭೌಗೋಳಿಕವಾದ ಕಾರಣದಿಂದ ಮತ್ತು ಮಿನಿಮಮ್ ಶಿಕ್ಷಕರು ಹೆಚ್. ಪಿ ಎಸ್ ಶಾಲೆಗಳಲ್ಲಿ ಅಂದರೆ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕೊಡಲೇ ಬೇಕಾದ ಕಾರಣದಿಂದ ಶಿಕ್ಷಕರ ಹುದ್ದೆಗಳ ಕೊರತೆ ಎಲ್ಲಾ ಕಡೆ ಬರುತ್ತಿದೆ. ಹಾಗಾಗಿ ನಿವೃತ್ತಯೂ ಆ ಗುತ್ತಿದೆ. ಈ ವರ್ಷದಿಂದ ನಿವೃತ್ತಿಯೂ ಆಗುತ್ತಿದೆ. ಹಾಗಾಗಿ ನಮಗೆ ಶಿಕ್ಷಕರ ಹುದ್ದೆಯ ಅಗತ್ಯ ಇದೆ. ನಾವು ಕೆಲವು ಸುಮರು 6–7 ತಿಂಗಳ ಹಿಂದೆ Finance Department ನವರಿಗೆ 8000 ಶಿಕ್ಷಕರು ಬೇಕು ಎಂಬ ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಅಲ್ಲಿ ಈ ರೀತಿಯಾದ ರೇಶಿಯೋ ಮತ್ತು work load distribution issue ಇವೆಲ್ಲವೂ ಸುದೀರ್ಘವಾಗಿ ಚರ್ಚೆ ಆಗಿ ಈಗ ನಾವು ಹೈಸ್ಕೂಲು ಮತ್ತು ಜೂನಿಯರ್ ಕಾಲೇಜುಗಳಲ್ಲಿ ಹೇಗೆ ಅತಿಥಿ ಉಪನ್ಯಾಸಕರನ್ನು ಖಾಯಂ ಶಿಕ್ಷಕರು ಬರುವವರೆಗೆ ತುಂಬಿಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತಿದ್ದೇವೋ, ಹಾಗೆಯೇ ಪ್ರಾಥಮಿಕ ಶಾಲೆಗಳಿಗೂ ಸಹ ನಾವು ತುಂಬಿಕೊಳ್ಳಬೇಕು ಎನ್ನುವಂತಹ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಅತೀ ಶೀಘ್ರದಲ್ಲಿಯೇ ಅದನ್ನು ಮಾಡಿಸುವುದಕ್ಕೆ ಸರ್ಕಾರವಾಗಿ ನಾವು ಎಲ್ಲ ಕ್ರಮಗಳನ್ನೂ ತೆಗೆದುಕೊಡು ಖಾಲಿ ಇರುವಂತಹ ಹುದ್ದೆಗಳನ್ನು ನಾವು ತುಂಬಿ

ಕೊಡುವುದಕ್ಕೆ ಈ ತಾತ್ಕಾಲಿಕವಾದಂತಹ ಪರಾಯ ವ್ಯವಸ್ಥೆಯನ್ನು ಮಾಡುತ್ತೇವೆ. ಶಾಶ್ವತವಾಗಿ ಅವರ ನೇಮಕಾತಿ ಪ್ರಕ್ರಿಯೆಗಳನ್ನು ಸಹ ಪೂರ್ಣ ಗೊಳಿಸುವುದಕ್ಕೆ ನಾವು ಬದ್ಧವಾಗಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾಗೇರಿಯವರು ಸುತ್ತಿ ಬಳಸಿ ಉತ್ತರ ಹೇಳಿದ್ದಾರೆ. ಸುಮ್ಮನೇ ಹೇಳಿದ್ದಾರೆ. ಯಾವಾಗ ನೇಮಕ ಮಾಡಿದರು? ನಾಲ್ಕು ವರ್ಷ ಆಯಿತು. ಎಷ್ಟು ಸಾರಿ ನೇಮಕ ಮಾಡಿದ್ದೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸುಮಾರು 20 ಸಾವಿರ ತನಕ ನೇಮಕ ಮಾಡಿದ್ದೇವೆ. ಅಗತ್ಯ ಇರುವಾಗ ಶಿಕ್ಷಕರ ನೇಮಕ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ: Retireಆಗುತ್ತಿದ್ದಾರಲ್ಲ? ವರ್ಷಕ್ಕೆ 5ಸಾವಿರ 6ಸಾವಿರretire ಆಗುತ್ತಾರಲ್ಲ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರನ್ನು ತುಂಬಲಿಕ್ಕೇ ನಾವು ಕೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ: Retireಆಗುವವರನ್ನು ತುಂಬಬೇಕಲ್ಲ? ಇದು continuous process.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: Ratio problem ಇದೆ.

ಶ್ರೀ ಸಿದ್ದರಾಮಯ್ಯ: ಯಾವ ratio problem ಇದೆ. ನಾನು ಆದೇಶ ತರಿಸಲಾ? 2005ರಲ್ಲಿ ಒಂದು ಆದೇಶವನ್ನು ಹೊರಡಿಸದ್ದೇವೆ. 10 ವಿದ್ಯಾರ್ಥಿಗಳು ಇದ್ದರೂ ಕೂಡ ಒಂದು ಟೀಚರ್ ಕೊಡಬೇಕು, ಒಂದು ಕೊಠಡಿ ಕೊಡಬೇಕು ಎಂದು ಆದೇಶ ಇದೆ. 10 ವಿದ್ಯಾರ್ಥಿಗಳು ಇದ್ದರೂ ಕೂಡ ಒಂದು ಟೀಚರ್ ಇರಬೇಕು, ಒಂದು ಕೊಠಡಿ ಇರಬೇಕು ಎಂದು ಹೇಳಿ ಆದೇಶ ಮಾಡಿದ್ದೇವೆ. ನೀವು 28 ರೇಶಿಯೋ ಇರಬೇಕು, 30 ರೇಶಿಯೋ ಇರಬೇಕು ಎಂದು ಹೇಳುತ್ತೀರಿ? ಏಕೆ? ಹಾಗಿದ್ದ ಮೇಲೆ ಅಂದರೆ 28 ರೇಶಿಯೋ ಇದ್ದ ಮೇಲೆ ಇಷ್ಟೊಂದು ಜನ ಹಾಗಾದರೆ ಕೊರತೆ ಏಕಿದ್ದಾರೆ? ಬಾಗೇಪಲ್ಲಿಯಲ್ಲಿ 300 ಶಿಕ್ಷಕರ ಕೊರತೆ ಇದೆ. ಇವರ ಹತ್ತಿರ 171 ಕೊರತೆ ಇದೆ. ಇವರ ಹತ್ತಿರ200 ಕೊರತೆ ಇದೆ. ಏಕೆ ಹಾಗೆ ಆಗುತ್ತದೆ?

(ಬಾವಿಯಿಂದ ಮಾನ್ಯ ಸದಸ್ಯರಾದ ಶ್ರೀ ಎನ್ .ಸಂಪಗಿ ಅವರು ಮಾತನಾಡುತ್ತಿದ್ದರು)

ಶ್ರೀ ಸಿದ್ದರಾಯ್ಯ: ನಿಮ್ಮ ಕ್ಷೇತ್ರದಲ್ಲಿಯೇ ಕೊರತೆ ಇರಬಹುದೇನೋ? ನನಗೆ ಗೊತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೊರತೆ ಏಕೆ ಇದೆ ಎನ್ನುವುದನ್ನೂ ಸಹ ನಾನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ನಾನು ಏನು ಹೇಳುತ್ತೇನೆಂದರೆ ನಿಮಗೆ 365 ದಿನ ಶಾಲೆಯಲ್ಲಿ ಕೆಲಸ ಇರುವುದಿಲ್ಲ. ಮಧ್ಯದಲ್ಲಿ ರಜೆ ಇರುತ್ತದೆ.ಏಕೆ ನೀವು recruitಮಾಡುವುದಿಲ್ಲ? Government ಅಂತೂ ಇದ್ದೇ ಇರುತ್ತದೆ. ನಿಮಗೆ ಜೂನ್ ಒಂದನೇ ತಾರಿಖು ಶಾಲೆ ಪ್ರಾರಂಭ ಆಗುವುದಕ್ಕೆ ಮುಂಚೆ ಏಪ್ರಿಲ್, ಮಾರ್ಚ್‌ನಲ್ಲಿ ಪ್ರೈಮರಿ ಸ್ಕೂಲಿಗೆ ಪರೀಕ್ಷೆಗಳೆಲ್ಲಾ ಮುಗಿಯುತ್ತದೆ. ನಿಮಗೆ ಮೂರು ತಿಂಗಳು ಟೈಮ್ ಸಿಗುತ್ತದೆ. Why can not you recruit? ಫೈನಾನ್ಸ್ ಇಲಾಖೆಯವರು ನಿಮಗೆ ಕೊಡುವುದೇ ಇಲ್ಲ. You have to take it up seriously.ಕ್ಯಾಬಿನೆಟ್‌ನಲ್ಲಿ ರೈಸ್ ಮಾಡಬೇಕು. Chief Ministerಗೆ ಹೇಳಬೇಕು. ಯಾರ ಹತ್ತಿರ ಫೈನನ್ಸ್ ಇದೆ? ಅಪ್ರೂವ್ ಮಾಡಿಸಿಕೊಳ್ಳಬೇಕು. ಏನು ಸಿಎಂ ಅವರು ಬಂದಿದ್ದಾರಾ? ಬಂದಿಲ್ಲ, ಅಥವಾ ನೀವು ಸಿಎಂಗೆ ಹೇಳಬೇಕು. ನಾನು ನಿಮಗೆ ಹೇಳುವುದೇನೆಂದರೆ ನಿಮ್ಮಮಾತನ್ನು ಫೈನಾನ್ಸ್‌ನವರು ಕೇಳಲಲ್ಲ ಎಂದರೆ ಅವರಿಗೆ ಕಳುಹಿಸಿರುತ್ತೀರಿ. ಅವರು ಯಾವುದೋ ಕೊಕ್ಕೆ ಹಾಕಿ turn down ಮಾಡಬಹುದು. Finance Department ಇರುವುದೇ ಕೊಕ್ಕೆ ಹಾಕುವುದಕ್ಕೆ. ಆದರೆ ಕುದುರೆ ಮೇಲೆ ಕುಳಿತಿರುವವರು ಸರಿಯಾಗಿದ್ದರೆ ಆಕೊಕ್ಕೆ ಗಿಕ್ಕೆನೆಲ್ಲಾ ಹೊಡೆದು ಹಾಕಿ ಬರೆಯಬಹುದು. ಯಾವತ್ತೂ ಕೇಳಿದ ತಕ್ಷಣ ಕೊಡುತ್ತೇವೆಂದು Finance Departmentನವರು ಬರೆಯುವುದಿಲ್ಲ ಯಾವ ಪ್ರಪೋಸಲ್‌ಗೂ ಅವರು ಬರೆಯುವುದಿಲ್ಲ. That is how they have been trained.ಅನುಭವದಿಂದ ಹೇಳುತ್ತಿದ್ದೇನೆ. ಮಾನ್ಯ ಬಚ್ಚೇಗೌಡರೇ, ನಾನು ಅವರದ್ದೆಲ್ಲವನ್ನೂ over rule ಮಾಡುತ್ತಿದ್ದೆ. ಟೀಚರ್ಸ್ ಕೊಡಬೇಕು. It is our primary responsibility.ನಾವುಒಂದುಕಡೆ ಆಕ್ಟ್ ಮಾಡುತ್ತೇವೆ.Right to Education Actನ್ನು ಜಾರಿಗೆ ತರುತ್ತಿದ್ದೇವೆ. ಇನ್ನೊಂದು ಕಡೆ ಟೀಚರ್ಸ್ ಕೊಡುವುದಿಲ್ಲ ಎಂದರೆ how can you give quality education?that too for the students studying in rural areas,and government schools?ಹುಡುಗರು ಮುಂದೆ ಬರುವುದಿಲ್ಲ. ಮೊದಲೇ studentsಬರುವುದಿಲ್ಲವೆಂದು ಹೇಳಿ ಸರ್ಕಾರಿ ಶಾಲೆಗಳನ್ನು ಮುಚ್ಚುವುದಕ್ಕೆ ಹೊರಟಿದ್ದೀರಿ. ಟೀಚರ್ಸ್ ಇಲ್ಲ ಎಂದರೆ ಇನ್ನೂ ಬರುವುದಿಲ್ಲ. ನಾವೇ ಸಹಾಯ ಮಾಡಿದ ಹಾಗೆ ಆಗುತ್ತದಲ್ಲಾ? ಇದನ್ನು ನಿಮಗೆ ಒತ್ತಾಯ ಮಾಡುತ್ತಿದ್ದೇನೆ.

ದಯಮಾಡಿ ಅದನ್ನು ಏನೂ ಹೇಳದಲೇ ಒಂದು time-bound programನಲ್ಲಿ ಇನ್ನೂಂದು ತಿಂಗಳಲ್ಲಿ, ಎರಡು ತಿಂಗಳಲ್ಲಿ Primary School Teachers ಅನ್ನು temporaryಆಗಿ ಆದರೂ ನೇಮಕ ಮಾಡುತ್ತೇವೆ ಅಥವಾ contractನಲ್ಲಾದರೂ ಮಾಡುತ್ತೇವೆಂದು ಹೇಳಿ. Contract appointmentಮಾಡಿ ಆಮೇಲೆ ಪರ್ಮನೆಂಟ್ ಆಗಿ ರಿಕ್ರೂಟ್ ಮಾಡಿದರೆ ಹೇಗೆ? ಪ್ರೋಸೆಸ್ ಈಗಿನಿಂದಲೇ ಶುರು ಮಾಡುತ್ತೇವೆ ಎಂದು ಆತರಹ ಉತ್ತರ ಕೊಡಿ. ಅದು ಏನಾಗುತ್ತದೋ ಆ ಉತ್ತರ ಕೊಡಿ. ಯಾವಾಗ ಮಾಡುತ್ತೀರಿ ಎಂದು ಉತ್ತರ ಅವರಿಗೆ ಕೊಡಿ. Contract appointment ಯಾವಾಗ ಮಾಡಿಕೊಳ್ಳುತ್ತೀರಿ? ಇನ್ನೊಂದು ತಿಂಗಳಲ್ಲಿ ಇಷ್ಟು ಅಪಾಯಿಂಟ್ ಮಾಡಿಕೊಳ್ಳುತ್ತೇವೆ, ಹದಿನೈದು ದಿನದಲ್ಲಿ ಇಷ್ಟು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತೇವೆ ಎಂದು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಶಾಲೆ ಬಿಟ್ಟಂತಹ ವಿದ್ಯಾರ್ಥಿಗಳಿಗೆ ಕಿತ್ತೂರು ಚೆನ್ನಮ್ಮ ಶಾಲೆಯಲ್ಲಿ ಸೇರಿಸುವ ಪ್ರಯತ್ನ ಮಾಡುತ್ತೇವೆ. ಮಾನ್ಯ ಸಿದ್ದರಾಮಯ್ಯನವರೇ,ತಾವೇನು ಹೇಳಿದಿರಿಲ್ಲ, ಅದನ್ನೇ ನಾನು ಉತ್ತರದಲ್ಲಿ ಹೇಳಿದ್ದೇನೆ. ನಿಶ್ಚಿತವಾಗಿ ನಮ್ಮ ಜವಾಬ್ದಾರಿ ಅದು.ಮಕ್ಕಳಿದೆ ಶಿಕ್ಷಣ ಹಕ್ಕನ್ನು ಕಡ್ಡಾಯಗೊಳಿಸರುವಂತಹ ಕಾಯಿದೆಯನ್ನು ಸ್ವೀಕಾರ ಮಾಡಿದ್ದೇವೆ. ಇನ್ನು ಮುಂದಿನ ದಿನಗಳಲ್ಲಿ ಒಂದು ಶಾಲೆಯಲ್ಲಿ ಮಿನಿಮಮ್ ಎರಡು ಶಿಕ್ಷಕರು ಇರಲೇಬೇಕೆನ್ನುವಂತಹ ಜವಾಬ್ದಾರಿ ನಮ್ಮದು ಇದೆ. ಈ ರೀತಿ ನಾವು ಸಾಮಾಜಿಕವಾದಂತಹ ಜವಾಬ್ದಾರಿಗಳನ್ನು ಶಿಕ್ಷಣ ಕ್ಷೇತ್ರದ ಮೂಲಕ ನಿರ್ವಹಿಸಬೇಕಾದಂತಹದು ಏನು ಇದೆ. ನಿಶ್ಚಿತವಾಗಿ ಆ ಜವಾಬ್ದಾರಿಗಳನ್ನು ನಾವು ನಿರ್ವಹಿಸುತ್ತೇವೆ.ನಾನು ಮಾನ್ಯ ಸಿದ್ದರಾಮಯ್ಯನವರು ಏನು ಹೇಳಿದ್ದಾರೋ ಅದನ್ನೇ ನಾನು ಉತ್ತರದಲ್ಲಿ ಹೇಳಿದ್ದೇನೆ. ನಿಶ್ಚಿತವಾಗಿ ಈಗ High School, Junior College ವಿಚಾರ. ಒಂದು ಕಡೆ ಖಾಯಂ ರಿಕ್ರೂಟ್‌ಮೆಂಟೂ ನಡೆದಿದೆ.ಅತಿಥಿಉಪನ್ಯಾಸಕರ ನೇಮಕ ಕೂಡ ನಡೆದಿದೆ. High School Junior Collegeನದು ವಿಷಯ ಇಲ್ಲ. ಏಕೆಂದರೆ ಅದು ಎರಡೂ simultaneousಆಗಿ ಈಗಾಗಲೇ ಪ್ರೋಸೆಸ್ ನಡೆದು ಬಿಟ್ಟಿದೆ. ಈಗ ಇರುವುದು ಪ್ರೈಮರಿ ಶಾಲಾ ಶಿಕ್ಷಕರ ವಿಚಾರ. High School, Junior Collegeದು ತೊಂದರೆ ಆಗುವುದಿಲ್ಲ,ಮಾನ್ಯ ಸಂಪಂಗಿಯವರೇ. As it is ನಿಮ್ಮ ಪ್ರಕಾರ ಮುಂದೆ ಹೋದರೆ, ಅದಲ್ಲಾ ಮುಂದೆ ಹೋಗುತ್ತದೆ, ಸರಿ ಆಗುತ್ತದೆ. ಪ್ರೈಮರಿಯದು ನಿಜವಾಗಿ ಈಗೇನು 1:28 ರೇಶಿಯೋ ಎಲ್ಲಾ ಇದೆ, ಇದನ್ನು

ಅಳತೆಗೊಲನ್ನಾಗಿ ಇಟ್ಟುಕೊಳ್ಳಬಾರದು. ಏಕೆಂದರೆ ನಾವು ನದಿ ದಾಟುವಾಗ ಎಲ್ಲಾ ಕಡೆಗೆ ಒಂದೇ ಅಳತೆ ಎಂದು ಮಾಡುವುದಕ್ಕೆ ಆಗುತ್ತದಾ? ನಾನು ಹಿಂದೆ ಒಂದು ಸಲ ಹೇಳಿದ್ದೆ. ನದಿ ದಾಟುವಾಗ ಪ್ರಾರಂಭದಲ್ಲಿ ಒಂದು ಸ್ವಲ್ಪ ಆಳ ಇರುತ್ತದೆ, ಮಧ್ಯದಲ್ಲಿ ಇನ್ನೊಂದು ಸ್ವಲ್ಪ ಆಳ ಇರುತ್ತದೆ, ಮುಂದೆ ಹೋದ ಮೇಲೆ ಕಡಿಮೆ ಇರುತ್ತದೆ, ಜಾಸ್ತಿ ಆಗುತ್ತದೆ, ಹೀಗೆಲ್ಲಾ ಆಗುತ್ತದೆ. ಜಾಸ್ತಿ ಕಡಿಮೆ ಆಗುತ್ತದೆ. ನೀವು ನದಿ ಸರಾಗವಾಗಿ ನಾಲ್ಕು ಫೀಟ್ ಇದೆ ಎಂದು ದಾಟಲಿಕ್ಕೆ ಹೋದರೆ ಮಧ್ಯದಲ್ಲಿ ಅಲ್ಲಿ 12ಫೀಟ್ ಇರುತ್ತದೆ. ಈ ರೀತಿ ಅಳತೆಗೋಲು ಬೇರೆ ಬೇರೆ ಇರುತ್ತದೆ. ನಮ್ಮದು ಇಲ್ಲಿ ಕರಾವಳಿ, ಮಲೆನಾಡು ಮತ್ತು ಭೌಗೋಳಿಕವಾಗಿ ವಿಶೇಷವಾಗಿ ನಮ್ಮ ಹೈದರಾಬಾದ್–ಕರ್ನಾಟಕ, ಗಡಿ ಭಾಗ ಮತ್ತು ಬಾಂಬೆ–ಕರ್ನಾಟಕ ಎಂದೇನು ಭಾಗ ಇದೆ, ಇದು ನಿಜವಾಗಿ ಮತ್ತು ಎಲ್ಲಾ HPSಗಳಲ್ಲಿ ನಾವು ಮಿನಿಮಮ್ ಟೀಚರ್ಸ್ ಅನ್ನು ಇಡಲೇ ಬೇಕು.ಅಲ್ಲಿ students,Teachers ratioಎಂದು ಹೇಳುವುದಕ್ಕೆ ಬರುವುದಿಲ್ಲ. ಇದೆಲ್ಲವನ್ನೂ ನಾವು ಫೈನಾನ್ಸ್ ಗೆ convinceಮಾಡಿದ್ದೇವೆ. 6–8 ತಿಂಗಳ ಹಿಂದೆ ನಾವೇನು 8 ಸಾವಿರ ಶಿಕ್ಷಕರನ್ನು ಖಾಯಂ ಆಗಿ ನೇಮಕಾತಿ ಮಾಡಬೇಕೆಂದು ಇದ್ದೇವೋ, ಅದಕ್ಕೆ ನಾವು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಈಗ ಅದಕ್ಕಿಂತಲೂ ಸ್ವಲ್ಪ ಹೆಚ್ಚು ಕೊರತೆಗಳು ಆಗಿರಬಹುದು. ಏಕೆಂದರೆ ನಿವೃತ್ತಿಗಳು ಇತ್ಯಾದಿಗಳು ಆಗುತ್ತಿವೆ. ಹಾಗಾಗೆ ಅದುವರೆಗೆ ಅತಿಥಿ ಉಪನ್ಯಾಸಕರನ್ನುಹೇಗೆ ಜೂನಿಯರ್ ಕಾಲೇಜು, ಹೈಸ್ಕೂಲಿಗೆ ತೆಗೆದುಕೊಂಡಿದ್ದೇವೋ ಹಾಗೆಯೇ ಅತಿಥಿ ಶಿಕ್ಷಕರನ್ನು ನಮ್ಮ ಪ್ರಾಥಮಿಕ ಶಾಲೆಗಳಿಗೆ ತೆಗೆದುಕೊಳ್ಳುವುದಕ್ಕೆ ಕಾಲ ಮಿತಿಯೊಳಗೆ ತೆಗೆದುಕೊಂಡು ನಮ್ಮ ಮಕ್ಕಳಿಗೆ ಶಿಕ್ಷಣಕ್ಕೆ ತೊಂದರೆ ಆಗದೇ ಇರುವಂತೆ ಜವಾಬ್ದಾರಿಯನ್ನು ನಿರ್ವಹಿಸುತ್ತೇವೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಅವರು ಹೇಗೂ ಕಾಪಿ ಕೊಟ್ಟಿಲ್ಲ. ಹಣಕಾಸು ಇಲಾಖೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಇದೆ. ನಾಳೆ ಬೆಳಗ್ಗೆ ಅವರಿಗೆ ಕಾಪಿ ತೆಗೆದು ಕೊಡಲಿ.

ಶ್ರೀ ಗೋವಿಂದ ಎಂ.ಕಾರಜೋಳ: ಕೊಡುತ್ತಾರೆ ಬಿಡಿ.

ಶ್ರೀ ಸಿದ್ದರಾಮಯ್ಯ: ಸ್ವಲ್ಪ ಕೇಳಿ, ಕಾಪಿ ತೆಗೆದು ಕೊಡಲಿ. ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಆರ್ಥಿಕ ಇಲಾಖೆ ಇರುವುದರಿಂದ ನಾಳೆ ಬೆಳಿಗ್ಗೆ ಒಂದು ನಿಖರವಾದ ಉತ್ತರವನ್ನು ಕೊಡಲಿ, ಮಾನ್ಯ ಸಚಿವರೂ ಇರಲಿ ಅವರೂ ಇರಲಿ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ವಿ. ಎಲ್.ಪಾಟೀಲ್‌ರು ಸಚಿವರಾಗಿ ಇದ್ದಾಗ ತಾವು ಮಂತ್ರಿಗಳಾಗಿ ಇದ್ದೀರಿ, ಅವರ ಉತ್ತರವನ್ನು ತಾವು

ಕೇಳಿದ್ದೀರಿ. ಅದಕ್ಕಿಂತ ನಮ್ಮ ಮಾನ್ಯ ಕಾಗೇರಿಯವರು ಚೆನ್ನಾಗಿಯೇ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ಯಾರು? ಕಾಗೇರಿಯವರು ಬುದ್ಧಿವಂತರಿದ್ದಾರೆ. ಇವರು ಬುದ್ಧಿವಂತಿಕೆಯಿಂದ ಉತ್ತರವನ್ನು ಕೊಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ನೀವು ವಿ. ಎಲ್. ಪಾಟೀಲ್‌ರು ಕೊಡುವ ಉತ್ತರವನ್ನು ಕೇಳಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮುಖ್ಯಮಂತ್ರಿಗಳಿಂದ ಕಮಿಟ್‌ಮೆಂಟ್ ಮಾಡಿಸೋಣ ಬಿಡಿ.

(ಗೊಂದಲ)

ಶ್ರೀಗೋವಿಂದ ಎಂ.ಕಾರಜೋಳ: ಇರಲಿ ಬಿಡಿ, ಕೊಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೇ, ಈ ವಿಷಯವನ್ನು ನಾಳೆಗೆ ಹಾಕಿಕೊಳ್ಳಿ. ಆಯಿತು, ನಿಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಟಿ.ಬಿ. ಜಯಚಂದ್ರ: ಇಡೀ ರಾಜ್ಯದ ಸಮಸ್ಯೆ ಆಗಿರುವುದರಿಂದ ಅವರು ರಾಜ್ಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಕೊಡಲಿ. ಬಾಗೇಪಲ್ಲಿ ಮತ್ತು ಸಂಡೂರಿಗೆ ಸೀಮಿತವಾಗಿ ಬೇಡ. ಇಡೀ ರಾಜ್ಯದ ಬಗ್ಗೆ ಉತ್ತರವನ್ನು ಕೊಟ್ಟಾಗ ಎಲ್ಲರೂ ಮಾತನಾಡೋಣ.

(ಈ ಹಂತದಲ್ಲಿ ಧರಣಿಯಲ್ಲಿ ಇದ್ದ ಮಾನ್ಯ ಶಾಸಕರಾದ ಶ್ರೀ ಈ. ತುಕಾರಾಂ. ಎನ್.ಸಂಪಂಗಿಯವರು ಮತ್ತುಶ್ರೀ ಕೆ.ಅಭಯಚಂದ್ರ ಜೈನ್ ಅವರುಗಳು. ತಮ್ಮ ಸ್ಥಾನಗಳಿಗೆ ತೆರಳಿದರು)

ಉಪಾಧ್ಯಕ್ಷರು: ಮಾನ್ಯ ರೇವಣ್ಣನವರು, ಗಮನ ಸೆಳೆಯುವ ಸೂಚನೆ.

2.ವಿಷಯ: ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವರಾಜ್ಯ ಹೆದ್ದಾರಿ–8ರಹಿರಿಸಾವೆ–ಶ್ರವಣಬೆಳಗೊಳ–ಶನಿವಾರಸಂತೆಯರಸ್ತೆ ಕಾಮಗಾರಿಗಾಗಿ ಮಂಗಳಾಪುರ ಗ್ರಾಮದಲ್ಲಿ ಒಟ್ಟು 1ಎಕರೆ5ಗುಂಟೆ ಜಮೀನನ್ನು ಭೂ–ಸ್ವಾದೀನ ಪಡಿಸಿಕೊಳ್ಳುವ ಬಗ್ಗೆ:

ಶ್ರೀ ಹೆಚ್. ಡಿ ರೇವಣ್ಣ: ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ–8ರ ಹಿರಿಸಾವೆ–ಶ್ರವಣಬೆಳಗೊಳ–